VIJAYAKUMAR KANNUR
Digitally signed by VIJAYAKUMAR KANNUR
Date: 2026.03.07 10:52:59 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 06.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ AMT ವಕೀಲರಿಂದ :**

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವೆನು. ನಾನು ಮುಧೋಳ ಪಟ್ಟಣದಲ್ಲಿ ಹುಟ್ಟಿ ಬೆಳೆದಿರುವೆನು. ನಾನು ಗೌಂಡಿ ಕೆಲಸ ಮಾಡುತ್ತಿರುವೆನು. ಈ ದೂರು ದಾಖಲು ಮಾಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುವೆನು. ಆ ದೂರಿನಲ್ಲಿ ನಾನು ಉದ್ಯೋಗ ಸೆಂಟರಿಂಗ್ ಕೆಲಸ ಮಾಡುವುದಾಗಿ ಎಂದು ಹೇಳಿ ಬರೆಸಿರುವೆನು. ನಮ್ಮ ಮನೆಯ ಒಂದು ತಿಂಗಳಿನ ಕನಿಷ್ಟ ಖರ್ಚು ರೂ. 3 ಸಾವಿರ ಇರುವುದು. ನಾನು ಪ್ರತಿ ದಿನ ರೂ. 700/- ಆದಾಯ ಸಂಪಾದನೆ ಮಾಡುತ್ತಿರೆವನು. ಇದಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲಾತಿ ಈ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ. ಪ್ರತಿ ದಿನ ನಮಗೆ ಕಟ್ಟಡದ ಕೆಲಸ ಇರುವುದಿಲ್ಲ ಎಂದರೆ ಸರಿಯಲ್ಲ.

2. ಆರೋಪಿತಳ ಮನೆತನದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದು. ಆರೋಪಿತಳ ಗಂಡನ ಹೆಸರು ಸುರೇಶ. ಆತನ ಪರಿಚಯ ಕೂಡ ನನಗೆ ಇರುವುದು. ನನ್ನ ಮತ್ತು ಆತನ ಮಧ್ಯೆ ಒಳ್ಳೆಯ ಸ್ನೇಹ ಇರುವುದು ಎಂದರೆ ಸರಿ. ನನಗೆ ಒಂದು ವರ್ಷಕ್ಕೆ ಒಟ್ಟು ಎಷ್ಟು ಆದಾಯ ಬರುವುದು ಎಂದು ನನಗೆ ಹೇಳಲು ಆಗುವುದಿಲ್ಲ. ಆರೋಪಿತಳು ಈ ಹಣವನ್ನು ಯಾವ ದಿನಾಂಕದಂದು ಕೇಳಿರುವಳು ಎಂದು ನನಗೆ ಹೇಳಲು ಆಗುವುದಿಲ್ಲ. ಆರೋಪಿತಳು ಮತ್ತು ಅವಳ ಗಂಡ ಕೂಡಿಕೊಂಡು ನನ್ನ ಹತ್ತಿರ ಹಣ ಕೇಳಲು ಸಾಯಂಕಾಲ ಬಂದಿದ್ದರು. ಅವರು ರೂ. 2 ಲಕ್ಷ 10 ಸಾವಿರ ಹಣ ಕೊಡುವಂತೆ ಕೇಳಿದ್ದರು. ಈ ಹಣ ಕೇಳಿದ ದಿನದಂದು ನಾನು ನೀಡಿರುವುದಿಲ್ಲ, ಮರು ದಿನ ನಾನು ನೀಡಿರುವೆನು. ಹಣ ನೀಡಿದ ದಿನಾಂಕ ನನಗೆ ಹೇಳಲು ಬರುವುದಿಲ್ಲ.

3. ನಾನು ಸಾಲ ತೆಗೆದಿದ್ದು, ನಾನು ಬ್ಯಾಂಕಿನಿಂದ ಹಣ ತೆಗೆದುಕೊಂಡು ಬಂದು ಆರೋಪಿತಳಿಗೆ ನೀಡಿರುವೆನು. ನಾನು IDFC ಬ್ಯಾಂಕ್ ನಿಂದ ಸಾಲ ತೆಗೆದಿರುವೆನು. ಈ ಹಣ ತೆಗೆದುಕೊಂಡು ಹೋಗಲು ಆರೋಪಿ ಮತ್ತು ಅವಳ ಗಂಡ ಕೂಡಿಯೇ ಬಂದಿರುವರು. ಈ ಸಾಲ ನಾನು ಬ್ಯಾಂಕಿನಿಂದ ಪಡೆದ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಬ್ಯಾಂಕಿನವರು ಆ ದಾಖಲೆಯನ್ನು ನೀಡಿದರೆ ನಾನು ಹಾಜರು ಪಡಿಸುತ್ತೇನೆ. ನಾನು ಬ್ಯಾಂಕಿನಿಂದ ಪಡೆದ ಹಣ ಆರೋಪಿತಳಿಗೆ ನೀಡಿದ ಬಗ್ಗೆ ನನ್ನ ದೂರಿನಲ್ಲಾಗಲೀ, ನೋಟಿಸಿನಲ್ಲಾಗಲೀ ಮತ್ತು ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ಹೇಳಿ ಬರೆಸಿರುವುದಿಲ್ಲ.

4. ಆರೋಪಿಯ ಗಂಡ ಈಗ ಎಲ್ಲಿ ವಾಸವಾಗಿರುವನು ಎಂದು ಗೊತ್ತಿರುವುದಿಲ್ಲ. ಆರೋಪಿತಳ ಗಂಡನ ಮನೆ ಮುಧೋಳದ ಪಟ್ಟಣದ ಶ್ಯಾಮ್ಯೂವೆಲ್ ಶಾಲೆಯ ಹಿಂಬದಿಯಲ್ಲಿ ಇರುವುದು. ಆರೋಪಿತಳ ತವರು ಮನೆಯೂ ಸಹ ಅಲ್ಲೇ ಇರುವುದು ಎಂದರೆ ಸರಿ. ಆರೋಪಿತಳಿಗೆ ನಾನು ಸಾಲ ನೀಡುವ ಪೂರ್ವದಲ್ಲಿ ಅವಳಿಗೆ ಎಷ್ಟು ಆದಾಯ ಇರುವುದು ಮತ್ತು ಅವಳು ಎಲ್ಲಿ ಕೆಲಸ ಮಾಡುತ್ತಿರುವಳು ಎಂದು ನಾನು ವಿಚಾರಿಸಿರವುದಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಹಣ ನೀಡುವ ಪೂರ್ವದಲ್ಲಿ ಆ ಹಣ ಪಡೆದುಕೊಂಡು ವ್ಯಕ್ತಿಗೆ ಅದನ್ನು ಮರಳಿ ನೀಡುವ ಸಾಮರ್ಥ್ಯ ಇರುವುದೋ ಇಲ್ಲವೋ ಎಂದು ವಿಚಾರಣೆ ಮಾಡುತ್ತಾರೆ ಎಂದರೆ ಸರಿ. ನಾನು ಆರೋಪಿತಳಿಗೆ ಈ ಹಣ ನೀಡಿರುವೆನು. ಈ ಹಣಕಾಸಿನ ವ್ಯವಹಾರದಲ್ಲಿ ಹಿರಿಯರಾಗಿ ಬೇರೆ ಯಾರು ಹಾಜರಾಗಿರಲಿಲ್ಲ. ಈ ಹಣ ನೀಡಿದ ಬಗ್ಗೆ ಲಿಖಿತ ರೂಪದಲ್ಲಿ ಯಾವುದೇ ಕಾಗದ ಮಾಡಿಕೊಂಡಿರುವುದಿಲ್ಲ. ಆರೋಪಿತಳು 8 ದಿನ ಬಿಟ್ಟು ನಂತರ ಆ ಹಣ ಮರಳಿ ನೀಡುವುದಾಗಿ ಎಂದು ಹೇಳಿರುವಳು. ಈ ರೂ. 2 ಲಕ್ಷ ಹಣ ದೊಡ್ಡ ಮೊತ್ತವಾಗಿರುವುದು ಎಂದರೆ ಸರಿ. ನನಗೆ ರೂ. 2 ಲಕ್ಷ 10 ಸಾವಿರ ಹಣ ನೀಡುವಷ್ಟು ಆರ್ಥಿಕ ಸಾಮರ್ಥ್ಯ ಇರುವುದಿಲ್ಲ ಎಂದರೆ ಸಾಕ್ಷಿ ನುಡಿಯುವುದೇನೆಂದರೆ ತಾನು ಸಾಲ ಮಾಡಿದ್ದು ಅದರಿಂದ ಬಂದ ಹಣ ನೀಡಿರುವುದಾಗಿ ಎಂದು ಉತ್ತರಿಸುವರು.

5. ನನ್ನ ದೂರಿನ ಶಿರೋನಾಮೆಯಲ್ಲಿ ಆರೋಪಿತಳ ಉದ್ಯೋಗ ವ್ಯಾಪಾರ ಅಂತ ಬರೆಸಿದ್ದು, ಅವಳು ಯಾವ ವ್ಯಾಪಾರ ಮಾಡುತ್ತಿರುವಳು ಎಂದು ನನಗೆ ಮಾಹಿತಿ ಇರುವುದಿಲ್ಲ. ಆರೋಪಿತಳು ಶ್ಯಾಮ್ಯೂವೆಲ್ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿರುವಳು. ನನ್ನ ಮನೆಯು ಸಹ ಶ್ಯಾಮ್ಯೂವೆಲ್ ಶಾಲೆಯ ಹತ್ತಿರ ಇರುವುದರಿಂದ ಆರೋಪಿತಳು ಅಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿರುವ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದು. ಆರೋಪಿತಳು ಯಾವ ಉದ್ಯೋಗ ಮಾಡುತ್ತಿರುವಳು ಎಂದು ನನಗೆ ಮಾಹಿತಿ ಇರುವುದಿಲ್ಲ ಅದರೂ ಸಹಿತ ಅವಳ ಉದ್ಯೋಗ ವ್ಯಾಪಾರ ಅಂತ ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತಳು ಶ್ಯಾಮ್ಯೂವೆಲ್ ಶಾಲೆಯಲ್ಲಿ ರಿಸೆಪ್ಷನಿಷ್ಟ ಆಗಿ ಕೆಲಸ ಮಾಡುತ್ತಿರವಳು ಎಂದರೆ ಸರಿಯಲ್ಲ. ಅವಳು ಶಿಕ್ಷಕಿಯಾಗಿ ಕೆಲಸ ಮಾಡುತ್ತಿರುವಳು. ಆರೋಪಿತಳಿಗೆ ಸಮನ್ಸ ಕಳುಹಿಸುವ ಸಲುವಾಗಿ ಎರಡು ಮೊಬೈಲ್ ನಂಬರ ನಮೂದು ಮಾಡಿದ್ದು ಅವು ಮುತ್ತು ಎಂಬುವವರಾಗಿದ್ದು, ಆ ಮೊಬೈಲ್ ನಂಬರ ಯಾವ ಕಾರಣಕ್ಕೆ ನಮೂದು ಮಾಡಿರುವುದಾಗಿ ಎಂದು ನನಗೆ ಹೇಳಲು ಆಗುವುದಿಲ್ಲ. ಆರೋಪಿತಳ ಮೊಬೈಲ್ ನಂಬರ ನನ್ನ ಹತ್ತಿರ ಇರುವುದಿಲ್ಲ, ಅವಳ ಗಂಡನ ನಂಬರ ನನ್ನ ಹತ್ತಿರ ಇರುವುದು.

6. ಈ ಪ್ರಕರಣ ದಾಖಲು ಮಾಡುವ ಪೂರ್ವದಲ್ಲಿ ಕಳುಹಿಸಿಕೊಟ್ಟ ನೋಟಿಸು ಶ್ಯಾಮ್ಯೂವೆಲ್ ಶಾಲೆಯ ಹಿಂದಗಡೆ ವಾಟರ್ ಫಿಲ್ಟರ್ ಟ್ಯಾಂಕ್ ಹತ್ತಿರ ಅಂತ ನಮೂದು ಮಾಡಿರುವೆನು. ಈ ಶಾಲೆಯು ಮುಧೋಳ ಪಟ್ಟದಣ ಐಶ್ವರ್ಯ ಕಾಲೋನಿಯಲ್ಲಿ ಬರುವುದು ಎಂದರೆ ಸರಿ. ಐಶ್ವರ್ಯ ಕಾಲೋನಿಯ ಶ್ಯಾಮ್ಯೂವೆಲ್ ಶಾಲೆಯಿಎಂದ ಗುನ್ನಾಳೆ ಲೇಔಟ್ ಸುಮಾರು ಅರ್ಧ ಕಿ.ಮೀ ಅಂತರದಲ್ಲಿ ಇರುವುದು. ಈ ವಿಳಾಸದಲ್ಲೇ ಆರೋಪಿಗೆ ನ್ಯಾಯಾಲಯದ ಸಮನ್ಸ ಜಾರಿಯಾಗಿರುವುದು ಎಂದರೆ ಸರಿ. ನಿಪಿ 3 ರ ನೋಟಿಸು ಆರೋಪಿಯ ಸರಿಯಾದ ವಿಳಾಸಕ್ಕೆ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಉದ್ದೇಶಪೂರಕವಾಗಿ ನಿಪಿ 3 ರ ನೋಟಿಸಿನ ಅಂಚೆಯ ಲಕೋಟೆಯ ಜೊತೆ ಲಗತ್ತಿಸಿರುವ ಅಂಚೆ ಸ್ವೀಕೃತ ಪತ್ರವನ್ನು ಮುಚ್ಚಿಟ್ಟು ಅಂತರ ಜಾಲದ ಟ್ರಾಕ್ ರಿಪೋರ್ಟನ್ನು ಹಾಜರು

ಪಡಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ 3 ರ ನೋಟಿಸು ನಿಪಿ 5 ರ ದಾಖಲೆಯ ಪ್ರಕಾರ ಆರೋಪಿತಳಿಗೆ ಜಾರಿಯಾಗಿರುವುದಿಲ್ಲ ಅಂತ ಸೂಚಿಸುವುದು ಸರಿಯಲ್ಲ. ಆರೋಪಿತಳ ಮಗನಿಗೆ ಆರಾಮ ಆದ ನಂತರ ಆ ಹಣವನ್ನು ಮರಳಿ ನೀಡುವಂತೆ ಆರೋಪಿತ ಗಂಡನಿಗೆ ಕೇಳಿರುವೆನು. ನಿಪಿ 1 ರ ಚೆಕ್ ನ್ನು ಆರೋಪಿತಳು ಮತ್ತು ಅವಳ ಗಂಡ ಕೂಡಿಯೇ ನಮ್ಮ ಮನೆಯ ಹತ್ತಿರ ನೀಡಿರುವರು. ನಿಪಿ 1 ರ ಚೆಕ್ ನ್ನು ನಾನೇ ಬರೆದುಕೊಂಡಿರುವೆನು. ನಿಪಿ 1 ಎ ಸಹಿ ಆರೋಪಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

7. ಆರೋಪಿತು ಶಾಲೆ ಕಲಿತಿರುವಳು ಎಂದರೆ ಸರಿ. ಶಾಲೆ ಕಲಿತವರು ಈ ಇಂಗ್ಲೀಷನ ಕ್ಯಾಪಿಟಲ್ ಅಕ್ಷರಗಳಲ್ಲಿ ಸಹಿ ಮಾಡುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತಳು ಶ್ಯಾಮ್ಯೂವೆಲ್ ಶಾಲೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಪ್ರತಿ ತಿಂಗಳು ರೂ.6,800/- ಸಂಬಳ ಬರುತ್ತದೆ ಎಂದರೆ ಸರಿಯಲ್ಲ. ಆರೋಪಿತಳ ಗಂಡ ಕಳೆದ 10 ತಿಂಗಳಿಂದ ಮುಧೋಳ ಪಟ್ಟಣದಲ್ಲಿ ಇರುವುದಿಲ್ಲ ಎಂದರೆ ಸರಿ . ಆತನಿಗೆ ಮದ್ಯಪಾನ ಮಾಡುವ ಮತ್ತು ಇಸ್ಪೇಟ್ ಆಡುವ ದುಶ್ಚಟ ಇತ್ತು ಎಂದರೆ ಸರಿ. ಆರೋಪಿತಳ ಗಂಡ ಸುಮಾರು ರೂ.30 ಲಕ್ಷ ಹಣವನ್ನು ಬೇರೆ ಬೇರೆ ವ್ಯಕ್ತಿಗಳಿಂದ ಕೈಗಡ ರೂಪದಲ್ಲಿ ಸಾಲವಾಗಿ ಪಡೆದುಕೊಂಡಿರುವನು ಎಂದರೆ ಸರಿ. ಸುರೇಶನಿಗೆ ಆರೋಪಿತಳು ಅತ್ತೆ ಮಗಳಾಗಿರುವಳು ಎಂದರೆ ಸರಿ. ಸುರೇಶ ನನ್ನ ಕಡೆಯಿಂದ ಹಣವನ್ನು ಸಾಲವಾಗಿ ಪಡೆದುಕೊಂಡಿರುವನು ಎಂದರೆ ಸರಿ. ಸುರೇಶ ತೆಗದುಕೊಂಡಿರುವ ಸಾಲದ ಹಣದ ಮರು ಸಂದಾಯಕ್ಕಾಗಿ ಆತ ಆರೋಪಿತಳ ಚೆಕ್ ನ್ನು ನನಗೆ ನೀಡಿರುವನು ಎಂದರೆ ಸರಿಯಲ್ಲ. ಆರೋಪಿತಳು ಮತ್ತು ಅವಳ ಗಂಡ ಕೂಡಿಯೇ ನೀಡಿರುವರು.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ